# ಇಲ್ಲಿಯವರೆಗೆ...



ಸೋಲಿಗಪುರವೆಂಬ ಕುಗ್ರಾಮವಿರುತ್ತದೆ. ಊರಿನಲ್ಲಿ ಸುಮಾರು ಇನ್ನೂರು ಮನೆಗಳಿವೆ. ನಾಗರಿಕತೆಯ ಗಂಧಗಾಳಿ ಇಲ್ಲದ ಊರದು. ಊರಿನಿಂದ ಎರಡು ಮೈಲಿ ದೂರದಲ್ಲೊಂದು ಸ್ಮಶಾನ. ರಾತ್ರಿ 12ರ ಸಮಯದ ಮಹಾಕತ್ತಲಿನಲ್ಲಿ ಮಂತ್ರ, ತ್ರಿಮಯ ಸ್ವರ ಉಚ್ಚಾರಣೆ ಕೇಳಿಬರುತ್ತದೆ. ಬೆಂಕಿಯ ಬೆಳಕಲ್ಲಿ ಎರಡು ಅರೆಬೆತ್ತಲೆ ದೇಹಗಳು ಮಿನುಗುತ್ತಿರುತ್ತವೆ. ಒಬ್ಬ ನಲುವತ್ತೈದರ ಬಡಕಲು ವ್ಯಕ್ತಿ ಹಾಗೂ ಇನ್ನೊಬ್ಬ ಯುವಕ. ಇಬ್ಬರೂ ಕತ್ತಿಗೆ ತಲೆಬುರುಡೆಗಳ ಹಾರ, ಹಣೆಗೆ ರಕ್ತದ ತಿಲಕ ಹಾಕಿಕೊಂಡು ಕೈಕರಣ ಮಾಡುತ್ತಿದ್ದಾರೆ. ಒಬ್ಬ ರುದ್ರನಾಗ ಮತ್ತೊಬ್ಬ ಆತನ ಶಿಷ್ಯ ಮದಂತ. ವಾಮಚಾರದಲ್ಲಿರುವ ಮಾಟದಿಂದ ಕ್ಷಿತ ಪ್ರಯೋಗದ ತನಕ ಇಪ್ಪತ್ತನಾಲ್ಕು ವಿದ್ಯೆಗಳನ್ನು ಕಲಿತ ಗುರು ರುದ್ರನಾಗ ಶಿಷ್ಯನಿಗೆ ಅಷ್ಟೂ ವಿದ್ಯೆಗಳನ್ನು ಧಾರೆಯೆರೆದಿದ್ದಾನೆ. ಪ್ರೇತ–ಪಿಶಾಚಿಗಳಿಗೆ ರಕ್ತತರ್ಪಣ ನೀಡುವ ಕೆಲಸವನ್ನೂ ಮಾಡುತ್ತಿದ್ದಾರೆ.

ಇತ್ತ ಮಂಗಳಗೌರಿ ವ್ರತಕ್ಕಾಗಿ ಹೆಂಗಳೆಯರು ಅರಿಶಿಣ ಕುಂಕುಮ ಪೂಜೆಯಲ್ಲಿ ತೊಡಗಿರುತ್ತಾರೆ. ಆದರೆ ರುದ್ರನಾಗನ ಪತ್ನಿ ತುಂಗಮ್ಮ ಇಂತಹ ಯಾವುದೇ ಕಾರ್ಯಗಳಲ್ಲಿ ಭಾಗವಹಿಸುತ್ತಿಲ್ಲ. ಅದೇ ಊರಿನ ಸಾಹುಕಾರ ರಾಜಾರಾಯರು ಬೆಳಿಗ್ಗೆ ರುದ್ರನಾಗನ ಮನೆಗೆ ಬರುತ್ತಾರೆ. ರಾಜಾರಾಯರನ್ನು ನೋಡಿ ಈತನಿಂದ ಒಳ್ಳೆಯ ಲಾಭ ಸಿಗುತ್ತದೆ ಎಂದರಿತ ರುದ್ರನಾಗನ ಮುಖ ಅರಳುತ್ತದೆ. 'ಏನಾದರೂ ತೊಂದರೆಯಾಗಿದೆಯೇ?' ಎಂದು ಕೇಳುತ್ತಾರೆ ರಾಜಾರಾಯರು. ಹಸಿರು ಔಷಧಿಯ ರಾಮಯ್ಯನ ಮಕ್ಕಳಾದ ರೂಪ ಮತ್ತು ರಾಮು ಅವರಿಂದ ತೊಂದರೆಯಾಗಿದೆ. ತನ್ನ ಮಗ ರೂಪಳನ್ನು ಪ್ರೀತಿಸಿ ಮದುವೆಯಾಗುವುದಾಗಿ ಹೇಳುತ್ತಾನೆ. ರಾಮು ಪತ್ರಕರ್ತನಾಗಿದ್ದು, ತನ್ನ ವಿರುದ್ಧ ಪತ್ರಿಕೆಗಳಲ್ಲಿ ಬರೆಯುವುದಾಗಿ ಹೆದರಿಸುತ್ತಿದ್ದಾನೆ. ಹೀಗಾಗಿ ಈ ಇಬ್ಬರನ್ನೂ ಮಂತ್ರಶಕ್ತಿಯಿಂದ ಅಂತ್ಯಗೊಳಿಸಬೇಕು. ಅದಕ್ಕಾಗಿ ಒಂದು ಲಕ್ಷ ರೂಪಾಯಿ ಕೊಡುವುದಾಗಿ ಹೇಳುತ್ತಾರೆ. ಈ ಕೆಲಸವನ್ನು ಶಿಷ್ಯ ಮದಂತನ ಕೈಯಲ್ಲಿ ಮಾಡಿಸುತ್ತಾನೆ ರುದ್ರನಾಗ. ಪಕ್ಕದ ಊರಿನ ರಥೋತ್ಸವಕ್ಕೆ ಹೋಗಿದ್ದ ಮಕ್ಕಳಿಬ್ಬರೂ ಮರುದಿನ ಸ್ಮಶಾನ ಮುಂದೆ ಶವವಾಗಿ ಬಿದ್ದಿರುತ್ತಾರೆ. ಇದನ್ನು ನೋಡಿದ ರಾಮಯ್ಯ ಕಂಗೆಟ್ಟು ಹೋಗುತ್ತಾನೆ. ಈ ದೃಶ್ಯವನ್ನು ರಾಜಾರಾಯರು ನೋಡುತ್ತಾರೆ.

ಕಾರಿಕೊಂಡು ಸಾಯುತ್ತಾರೆಯೆ?'

`ಅಯ್ಯೋ... ಇದು ನಿಜಾ ಕಣ್ರೀ. ಬೇಕಾದರೆ ಇದನ್ನು ನೀವು ಊರಿನವರನ್ನು ವಿಚಾರಿಸಿ.'

ಮನೋಹರ `ಊರಿನವರನ್ನು ಕೇಳೋಲ್ಲ ಆದರೆ ನಾನೇ ಪರೀಕ್ಷಿಸುತ್ತೇನೆ.'

ಗಾಬರಿಯಿಂದ, `ಏನಂದ್ರಿ...' ಎಂದಳು.

`ಆ ಮಾಂತ್ರಿಕ ವಿದ್ಯೆ ಎನ್ನುವುದು ನಿಜವೋ ಅಥವಾ ಸುಳ್ಳೋ ಅಂತ.'

ಅರುಂಧತಿ ಭಯದಿಂದ `ಅಯ್ಯೋ ದೇವರೆ ನಿಮಗ್ಯಾಕ್ರಿ ಇಂತಹ ಕೆಟ್ಟ ಕುತೂಹಲ ಬಂತು? ಬೇಡ ಕಣ್ರಿ. ನನ್ನ ಅಣ್ಣ ಎಷ್ಟು ಒಳ್ಳೆಯವನೋ ಅಷ್ಟೇ ಕೆಟ್ಟವನು.'

ಮನೋಹರ ನಗುತ್ತಲೇ `ಅರು ನಿನ್ನ ಅಣ್ಣನಿಗೆ ನೀನು ಅಂದರೆ ತುಂಬಾ ಇಷ್ಟ ಅಲ್ಲವೇ?'

`ಹೌದು...'

`ಹಾಗಿದ್ದ ಮೇಲೆ ಪ್ರೀತಿಯ ತಂಗಿಯ ಗಂಡನಿಗೆ ನಿನ್ನ ಅಣ್ಣ ತೊಂದರೆ ಮಾಡಲಾರ. ಅಲ್ಲವೆ?'

ಅರುಂಧತಿ ಭಯದಿಂದ `ನನ್ನ ಅಣ್ಣಯ್ಯನ ಬಗ್ಗೆ ಹೀಗೆ ಅಂತ ಹೇಳಲು ಸಾಧ್ಯವಿಲ್ಲ. ತನ್ನ ವೃತ್ತಿಯನ್ನು ಅವನು ಮೊದಲು ಪ್ರೀತಿಸಿ ಗೌರವಿಸುತ್ತಾನೆ. ನಂತರ ಉಳಿದ ಸಂಬಂಧ, ಸೆಂಟಿಮೆಂಟ್‌ಗೆ ಬೆಲೆ ಕೊಡಲ್ಲ. ಏನೇ ಆಗಲಿ ನೀವು ಅವನನ್ನು ಕೆಣಕಬೇಡಿ.'

ಹೆಂಡತಿ ಗರ್ಭಿಣಿ. ನಾಳೆಯೋ ಅಥವಾ ನಾಡಿದ್ದೋ ಹೆರಿಗೆ ಆಗುತ್ತದೆ. ಅಂತಹವಳನ್ನು ಯಾಕೆ ಭಯಪಡಿಸಬೇಕು ಎಂದುಕೊಂಡು `ಆಯಿತು ಅರು ನಾನು ನಿನ್ನ ಅಣ್ಣನ ತಂಟೆಗೆ ಬರುವುದಿಲ್ಲ.'

ಅವಳು ಗಂಡನ ಕತ್ತಿನ ಸುತ್ತಲೂ ತೋಳುಗಳನ್ನು ಹಾರದಂತೆ ಬಳಸಿದಳು. ತನ್ನ ಜೇನು ತುಟಿಗಳನ್ನು ಅವನ ತುಟಿಗಳಿಗೆ ತಗುಲಿಸಿದಳು. ಗಾಢವಾಗಿ ಚುಂಬಿಸಿದಳು.

ಮನೋಹರ ಅಂದುಕೊಂಡ. ಇವಳ ಅಣ್ಣ ದೊಡ್ಡ ಮಾಂತ್ರಿಕ ಅಂತ ಕುಖ್ಯಾತಿ ಪಡೆದಿದ್ದಾನೆ. ಈ ಮಾಂತ್ರಿಕ ವಿದ್ಯೆ ನಿಜವಾಗಿಯೂ ಇರುವುದೆ? ಅದನ್ನು ಪರೀಕ್ಷಿಸುತ್ತೇನೆ. ಈ ಊರಿನಿಂದ ಹಿಂತಿರುಗುವುದರಲ್ಲಿ ಸತ್ಯ ತಿಳಿಯಬೇಕು. ಮನೋಹರ ಚಿಂತಿಸುತ್ತಿದ್ದಾನೆ. ಫ್ಲ್ಯಾಶ್ ಆಯಿತು. ಅವನ ಮುಖದಲ್ಲಿ ನಗು ಮೂಡಿತು. ಯಾಕೆ ಅಂದರೆ ಸೊಗಸಾದ ಪ್ಲಾನ್ ರೆಡಿ ಮಾಡಿದ್ದ.

* * *

## ರಾಜಾರಾಯರ ಸಾವು!

ರೋಚಕ ಸಾವಿನ ಸುದ್ದಿ. ಈ ಊರಿನ ಶ್ರೀಮಂತ ರಾಜಾರಾಯರು ಕಾಡಿನ ರಸ್ತೆಯಲ್ಲಿ ಸತ್ತು ಬಿದ್ದಿದ್ದರು. ಅದೂ ಎಂತಹ ಸಾವು! ದೇಹದ ತುಂಬಾ ನೇರಳೆ ಬಣ್ಣದ ಗೆಡ್ಡೆಗಳಾಗಿ ಹೆಣ ವಿಕಾರಗೊಂಡಿತ್ತು. ಬಾಯಿಂದ ನೊರೆ ಬರುತ್ತಿತ್ತು. ಹೆಣ ಬಿದ್ದಿದ್ದ ಜಾಗದಿಂದ ತುಸು ಮುಂದೆ ಕಂಡುಬರುತ್ತಿದೆ ಕಾರು. ಜನಗಳು ಗುಂಪುಗೂಡಿದ್ದಾರೆ. ಯಾವುದೋ ವಿಷಜಂತು ಕಡಿದಿರುವುದರಿಂದ ಈ ರೀತಿಯ ಸಾವು ಸಂಭವಿಸಿದೆ ಎಂದು ಜನಗಳು ಅಂದುಕೊಳ್ಳುತ್ತಿದ್ದಾರೆ. ಆ ಗುಂಪಿನಲ್ಲಿ ಹಸಿರು ಗಿಡಗಳ ರಾಮಯ್ಯ ಇದ್ದಾನೆ. ಅವನಿಗೆ ತೃಪ್ತಿಯಾಗಿದೆ. ತುಂಬಾ ನಷ್ಟ ಆಗಿರೋದು ಅಂದರೆ ಮಾಂತ್ರಿಕ ರುದ್ರನಾಗನಿಗೆ. ಏನಾದರೂ ಒಂದು ಕಾರಣದಿಂದ ತಿಂಗಳಿಗೆ ಒಬ್ಬರನ್ನಾದರೂ ಸಾಯಿಸಲು ರಾಜಾರಾಯ ಮಾಂತ್ರಿಕನಿಗೆ ಹಣ ಕೊಡುತ್ತಿದ್ದ. ರುದ್ರನಾಗನಿಗೂ ಸಹ ಈ ಸಾವಿನ ಬಗ್ಗೆ ಅನುಮಾನ ಬರಲಿಲ್ಲ. ಆದರೆ ಅವನ ದೃಷ್ಟಿ ರಾಮಯ್ಯನ ಮೇಲೆ ಹರಿಯಿತು.

ಏನೋ ಅನುಮಾನ ಬರುತ್ತಿದೆ. ಆದರೆ ಅವನ ಅನುಮನಕ್ಕೆ ಸ್ಪಷ್ಟವಾದ ರೂಪ ಇರಲಿಲ್ಲ. ಆದರೂ ಸಹ ರಾಮಯ್ಯನಂತಹ ಶತ್ರು ಶೇಷ ಉಳಿಯಬಾರದು. ಈ ಅಮಾವಾಸ್ಯೆಯ ದಿನ ಇವನನ್ನು ರಕ್ತೋದರನಿಗೆ ಬಲಿ ನೀಡಬೇಕು.

* * *

ಹೂವಿನ ಗಿಡಗಳಿಗೆ ನೀರು ಹಾಕಲು ತುಂಗಮ್ಮ ನೀರು ತುಂಬಿರುವ ಕೊಡವನ್ನು ಸೊಂಟದ ಮೇಲೆ ಇರಿಸಿಕೊಂಡು ಹೊರಗೆ ಬಂದಳು. ಗೇಟಿನ ಹತ್ತಿರ ಯಾರೋ ನಿಂತಿದ್ದಾರೆ. ಇತ್ತ ಕಡೆಯೇ ನೋಡುತ್ತಿದ್ದಾರೆ. ಅವಳು ಭಯದಿಂದ ಹಿಂದೆ ಸರಿದಳು. ಅದೇ ಸಮಯಕ್ಕೆ ಇವಳ ಇಬ್ಬರು ಮಕ್ಕಳು ಸಹ ಹೊರಗೆ ಬಂದರು. ಬಡಕಲು ಶರೀರದ ಪೊದೆಯಂತೆ ಗಡ್ಡ ಬೆಳೆಸಿರುವ ವ್ಯಕ್ತಿ ಯಾರೆಂದು ಗೊತ್ತಾಯಿತು.

ಹಸಿರು ಗಿಡಗಳ ರಾಮಯ್ಯ!

ಆದರೆ ಅಲ್ಲಿಯೇ ಯಾಕೆ ನಿಂತಿದ್ದಾನೆ. ಅದ್ಯಾಕೆ ಈ ರೀತಿ ನೋಡುತ್ತಿದ್ದಾನೆ ಎಂದುಕೊಂಡರು. ರಾಮಯ್ಯನ ಬಗ್ಗೆ ಊರಿನ ಜನಗಳಿಗೆ ಗೌರವ ಇತ್ತು. ಕೇವಲ ಇಪ್ಪತ್ತು ರೂಪಾಯಿಗಳನ್ನು ತೆಗೆದುಕೊಂಡು ಊರಿನ ಜನಗಳಿಗೆ ಹಸಿರು ಔಷಧಿಯನ್ನು ನೀಡಿ ಸಣ್ಣಪುಟ್ಟ ಕಾಯಿಲೆಗಳನ್ನು ಗುಣಪಡಿಸುತ್ತಿದ್ದ. ಆದರೆ ಒಳಗೂ ಸಹ ಬರದೆ ಯಾಕೆ ನುಂಗುವ ರೀತಿಯಲ್ಲಿ ನೋಡುತ್ತಿದ್ದಾನೆ.

ರಾಮಯ್ಯನ ದೃಷ್ಟಿ ಅವನ ಮನೆಯ ಮೇಲಿದೆ. ಏನನ್ನೋ ಹುಡುಕುತ್ತಿರುವಂತೆ ಅವನು ಸರಸರನೆ ತನ್ನ ದೃಷ್ಟಿಹರಿಸುತ್ತಿದ್ದಾನೆ. ತುಂಗಮ್ಮನಿಗೆ ಭಯ. ಗಂಡ ಮನೆಯಲ್ಲಿ ಇಲ್ಲದಿರುವಾಗ ಬೇರೆ